ಸ್ಥಗಿತಗೊಂಡಿದ್ದು ಇದೆ ತಲಗಟ್ಟಪುರ ಹುಮ್ನಾಬಾದ್ ಕಟ್ಟಡ ೧-೨ ವರ್ಷಗಳಿಂದ ನಿಂತಿದೆ ಕೆಲವುಕಡೆ ಬದಲಾವಣೆ ಮಾಡಬೇಕಾಗಿ ಬಂದಿದೆ ಕೆಲವು ಕಡೆ ರೀ ಟೆಂಡರ್ ಮಾಡಿ ಇಷ್ಟೇ ತಿಂಗಳಲ್ಲಿ ಮುಗಿಸ ಬೇಕೆಂದು ಸಮಯ ನಿಗದಿಪಡಿಸಿದ್ದೇವೆ. ಅಲ್ಲಿ ಕೂಡ ಮಾರ್ಕೆಟ್ ಕಟ್ಟಡ ಮಂಜೂರಾತಿಯು ಮಾಡಲಿಕ್ಕೆ ಅವಕಾಶ ಮಾಡಿಕೊಡುವುದರ ಜೊತೆಗೆ ಅಲ್ಲಿ ರೈತರಿಗೆ ಕುಡಿಯುವ ನೀರು ಕ್ಯಾಂಟೀನ್ ಸೌಲಭ್ಯ ಕೊಡಲಿಕ್ಕೆ ವ್ಯವಸ್ಥೆ ಮಾಡುತ್ತೇವೆ. ನಮ್ಮ ಬೇಡಿಕೆಯ ಮೇಲೆ ಉತ್ತರ ಕೊಡುವಾಗ ಹೇಳಿದ್ದೇನೆ, ಪ್ರೆಸ್ ಸ್ಟೇಬಿಲೈಸೇಷನ್ ಫಂಡ್‌ನಲ್ಲಿ ರೈತರಿಗೆ ಬೇಕಾಗತಕ್ಕ ಮಿನಿಮಮ್ ಫೆಸಿಲಿಟಿ ಕೊಡಲಿಕ್ಕೆ ಪ್ರಯತ್ನ ಮಾಡಿ ಮಾಡಿಕೊಡುತ್ತೇವೆ.

ಸಾಗಂವಳಿದಾರರಿಂದ ನೀರಾವರಿ ಕೆರೆಗಳ ಒತ್ತುವರಿ

ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) ಮಾನ್ಯ ಸಣ್ಣ ನೀರಾವರಿ**ರಾಜ್ಯ** ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಹಳಷ್ಟು ಕೆರೆಗಳ ಅಂಗಳಗಳು ಒತ್ತುವರಿಯಾಗಿ ಅನಧಿಕೃತವಾಗಿ ಸಾಗುವಳಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸರ್ಕಾರದವರು ಅಂಥಾ ಜಾಗಗಳನ್ನು ಕೆರೆಗಳಾಗಿ ಪರಿವರ್ತಿಸಿ ನೀರಾವರಿ ಆಯಕಟ್ಟು ಹೆಚ್ಚುವರಿ ಮಾಡುವುದಕ್ಕೆ ಯಾವ ಕಾರ್ಯಕ್ರಮ ಹಾಕಿಕೊಂಡಿದ್ದಾರೆ ?

ಶ್ರೀ ಆರ್. ಎನ್. ಲಕ್ಷ್ಮೀಪತಿಸಣ್ಣ ನೀರಾವರಿ ರಾಜ್ಯ ಮಂತ್ರಿಗಳು

ಅ) ಹೌದು.

ಆ) ಪರಿಶೀಲನೆಯಲ್ಲಿದೆ.

ಶ್ರೀ ನಾರಾಯಣರಾವ್ ಮನಹಳ್ಳಿ.—ಸ್ವಾಮಿ ಇದನ್ನು ಪರಿಶೀಲಿಸುತ್ತೇನೆ ಎಂದರೆ ಏನೂ ಪ್ರಯೋಜನವಾಗುವುದಿಲ್ಲ. ಇದರ ಬಗ್ಗೆ ನಿರ್ದಿಷ್ಟವಾಗಿ ಏನುಕ್ರಮ ತೆಗೆದುಕೊಳ್ಳುತ್ತೀರಿ ? ಮತ್ತು ಇದಕ್ಕೆ ಏನಾದರೂ ಒಂದು ಸಮಯವನ್ನು ಗೊತ್ತು ಮಾಡಿದ್ದೀರಾ ?

ಶ್ರೀ ಆರ್. ಎನ್. ಲಕ್ಷ್ಮೀಪತಿ,—ನಮ್ಮ ಸಂಸ್ಥಾನದಲ್ಲಿ ೨೩ ಸಾವಿರ ಕೆರೆಗಳಿವೆ. ಇವುಗಳಲ್ಲಿ ಬಹಳಷ್ಟು ಅವಧಿಕೃತ ಸಾಗುವಳಿ ಮಾಡುತ್ತಿದ್ದಾರೆ. ಇದನ್ನೆಲ್ಲ ನೋಡಿ ಸರ್ವೆ ಮಾಡಿಸಬೇಕಾದರೆ ಸರ್ವೆ ಡಿಪಾರ್ಟ್‌ಮೆಂಟ್‌ನಲ್ಲಿ ಸಿಬ್ಬಂದಿವರ್ಗವನ್ನು ಹೆಚ್ಚು ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ಎಲ್ಲೆಲ್ಲಿ ಇಂಥ ದೂರುಗಳು ನಮ್ಮ ಇಲಾಖೆಗೆ ಬರುತ್ತವೆ. ಅಂಥ ಕಡೆ ನಾವು ಗಮನಹರಿಸಿ ಅನಧಿಕೃತ ಸಾಗುವಳಿದಾರರನ್ನು ಅಲ್ಲಿಂದ ಓಡಿಸಬೇಕೆಂದು ಕಂದಾಯ ಇಲಾಖೆಯವರಿಗೆ ಆದೇಶವನ್ನು ಕೊಟ್ಟು ಅನಧಿಕೃತ ಸಾಗುವಳಿಯನ್ನು ಬಿಡಿಸಂತ್ತಿದ್ದೇವೆ.

ಶ್ರೀ ಕೆ. ಹೆಚ್. ರಂಗನಾಥ್.—ಸ್ವಾಮಿ, ಕೆರೆಯ ಅಂಗಳ ಒತ್ತುವರಿಯಾಗುತ್ತಿದೆ ಎನ್ನುವ ವಿಚಾರವನ್ನು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದರೂ ಕೂಡ ಇವರು ಆದರೂ ಆಗಲಿ ಎನ್ನುವ ರೀತಿಯಲ್ಲಿ ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಿದ್ದಾರೆ. ಇದೇ ರೀತಿ ಪ್ರತಿಯೊಂದು ಕೆರೆಯ ಅಂಗಳವೂ ಒತ್ತುವರಿ ಆಗುತ್ತಾ ಆಗುತ್ತಾ ಹೋದರೆ ಕೊನೆಗೆ ಇದು ಎಲ್ಲಿಗೆ ಹೋಗಿ ನಿಲ್ಲುತ್ತದೆ ಎಂಬುದನ್ನು ಮಾನ್ಯ ಸಚಿವರು ಯೋಚನೆಮಾನ್ಯೇ ಮಾಡಿದಂತೆ ಕಾಣುತ್ತಿಲ್ಲ. ಇನ್ನು ನದಿಗಳ ಪಾತ್ರಗಳಲ್ಲಿಯೂ ಕೂಡ ಉಳುಮೆ ಮಾಡುತ್ತಿದ್ದಾರೆ, ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿ ಏನಿದೆ ಎಂದರೆ ಕೆರೆಗೆ ನೀರು ಬರತಕ್ಕ ಜಾಗದಲ್ಲಿ ಕೆರೆಯ ಅಂಗಳದಲ್ಲಿ, ನದಿ ಪಾತ್ರದಲ್ಲಿ ಇರತಕ್ಕ ಜಮೀನನ್ನು ಯಾರಾದರೂ ಒತ್ತುವರಿಯನ್ನು ಮಾಡಿಕೊಂಡರೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದಿದೆ. ಇದರ ಪ್ರಕಾರ ಇಪತ್ತಿನವರೆಗೆ ಆಗಿರತಕ್ಕ ಒತ್ತುವರಿಯನ್ನು ಬಿಡಿಸಿಕೊಳ್ಳುವುದಕ್ಕೆ ತಾವು ಪ್ರಯತ್ನಮಾಡುತ್ತೀರಾ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಎಲ್ಲೆಲ್ಲಿ ಇಂಥ .....

ಶ್ರೀ ಕೆ.ಹೆಚ್. ರಂಗನಾಥ್.—ಸ್ವಾಮಿ, ನಮ್ಮ ಸಂಸ್ಥಾನದಲ್ಲಿ ೨೩ ಸಾವಿರ ಕೆರೆಗಳು ಇವೆಯೆಂದು ಹೇಳಿದ್ದೀರಿ. ನಾನಾದರೂ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ, ಈ ತಾರೀಕಿನವರೆಗೆ ಎಷ್ಟು ಕೆರೆಗಳ ಜಾಗ ಎಷ್ಟು ನದಿಗಳ ಪಾತ್ರ ಒತ್ತುವರಿಯಾಗಿದೆ ಅದನ್ನು ನಿಲ್ಲಿಸಿ ಇನ್ನು ಮುಂದೆ ಈ ರೀತಿ ಆಗದಂತೆ ಕ್ರಮ